

'ಬಡ್ಡಿ ಮಕ್ಳು, ನೀವು ಚರಂಡಿ ತೊಳೀತೀರಿ ಅಂತ ಅವ್ರಿಗೆ ಗೊತ್ತಾದ್ರೆ ಊರಲ್ಲಿರೋ ಚರಂಡೀನೆಲ್ಲಾ ನಿಮ್ ಕೈಲೇ ತೊಳೆಸ್ತಾರೆ..'

ತೇಜಸ್ವಿ ನೆನಪಿನ ದೋಣಿಯಲ್ಲಿ -1

ಪೂರ್ಣಚಂದ್ರ ತೇಜಸ್ವಿ ಕಥೆಗಳನ್ನು ಎಷ್ಟು ಸಲ ಬೇಕಾದರೂ ಓದಬಹುದು, ಬೋರಾಗೋದಿಲ್ಲ. ಹಾಗೆಯೇ ಅವರ ನೆನಪುಗಳು; ಮೊಗೆದಷ್ಟೂ ಮೇಲಕ್ಕೆ ಬರುತ್ತವೆ. ಮೂಡಿಗೆರೆಯಲ್ಲಿ ಅವರೊಂದಿಗೆ ಒಡನಾಡಿದ ಕೆಲವು ಅಪರೂಪದ ಪ್ರಕರಣಗಳು ಇಲ್ಲಿವೆ..

★ ಧನಂಜಯ ಜೀವಾಳ ಬಿ.ಕೆ.

ನಾನವತ್ತು ಮೂಡಿಗೆರೆ ಕಡೆ ತಲೇನೇ ಹಾಕಲ್ಲ!

www.tejaswivismaya.com

ತೇಜಸ್ವಿ ಜನರೊಳಗೊಂದಾಗಿದ್ದೂ ನೀರೊಳಗಣ ಎಣ್ಣೆಯಂತೆ, ಕೆಸುವಿನೆಲೆ ಮೇಲಿನ ನೀರ ಹನಿಯಂತೆ ಬದುಕಿದ್ದವರು. ಸೆಲೆಬ್ರಿಟಿಗಳೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುವುದು ಯಾವುದೇ ದೇಶಗಳ, ಯಾವುದೇ ಕಾಲಘಟ್ಟಗಳಿಗೂ ಸಾರ್ವಕಾಲಿಕ ಸತ್ಯ. ಹಾಗೆಯೇ ತೇಜಸ್ವಿಯಂತಹ ಮೇರು ವ್ಯಕ್ತಿಯೊಂದಿಗೆ ಸಂಪರ್ಕ, ಒಡನಾಟ, ಮೂಡಿಗೆರೆಯಂತಹ ಪುಟ್ಟ ಊರಿನಲ್ಲಿ ನೂರಾರು ಜನರಿಗೆ ಸಾಧ್ಯವಿತ್ತು. ನಮಗಾರಿಗೂ ಇಲ್ಲದ, ನಾವ್ಯಾರೂ ಪ್ರಯತ್ನವನ್ನೂ ಪಡದಂತಹ ಸಂವಹನವನ್ನು ತೇಜಸ್ವಿಯವರು ಮೀನು ಮಾರುವವರೊಡನೆ, ಗ್ಯಾರೇಜಿನ ಹುಡುಗರೊಂದಿಗೆ, ಪೇಪರ್ ಹಂಚುವವರೊಡನೆ, ತರಕಾರಿ ಅಂಗಡಿಯವರೊಡನೆ, ಬೀಡಾ ಶಾಪಿನವರೊಡನೆ, ಟೈರ್-ಟ್ಯೂಬ್ ಪಂಚರಿನವರೊಡನೆ ಅತ್ಯಂತ ಯಶಸ್ವಿಯಾಗಿ ಸಾಧಿಸಿಬಿಟ್ಟಿದ್ದರು.

ನಾನು ಕಂಡ ಯಶಸ್ವೀ ಕೌನ್ಸೆಲರ್‌ಗಳಲ್ಲಿ ಒಬ್ಬರಾದ ತೇಜಸ್ವಿಯವರು ತಮ್ಮ ಕಷ್ಟ ದುಮ್ಮಾನಗಳನ್ನು ಹೇಳಿಕೊಂಡು ಬರುತ್ತಿದ್ದ ಗೃಹಿಣಿಯರಿಗೆ, ಮದುವೆಯ ನಿರೀಕ್ಷೆಯಲ್ಲಿರುವ ಹುಡುಗಿಯರಿಗೆ, ಜೀವನ ಸಂಗ್ರಾಮದಲ್ಲಿ ಸೋತು ದಿಕ್ಕೆಟ್ಟವರಿಗೆ, ನಿರುದ್ಯೋಗಿ ಯುವಕರಿಗೆ ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಧೈರ್ಯ ಹೇಳುತ್ತಿದ್ದರು. ಬದುಕಿನ ಸಾಧ್ಯತೆಗಳನ್ನು ತೆರೆದಿಟ್ಟು ಭರವಸೆಗಳನ್ನು ಮೂಡಿಸಿ ಕಳುಹಿಸುತ್ತಿದ್ದರು. ದಗಲ್ಬಾಜಿಗಳು, ದುರುಳರು, ಅಪರಾಧಿಗಳು, ಮೋಸಗಾರರನ್ನೂ ಸಹ ಕರುಣೆಯಿಂದ ನೋಡಿ ಪರಿಸ್ಥಿತಿಯ ಲಾಭ ಪಡೆಯಲು ಯತ್ನಿಸಿದ ಅಸಹಾಯಕರೆಂಬಂತೆ ಸಹಾನುಭೂತಿ ವ್ಯಕ್ತಪಡಿಸುತ್ತಿದ್ದರು.

ಮೂಡಿಗೆರೆಯಂತಹ ಅತ್ಯಂತ ಸಾಧಾರಣ ಊರಿನಲ್ಲಿ ಇಂತಹ ಅಸಾಧಾರಣ ಚೇತನವೊಂದು ಜಗತ್ತೇ ಬೆರಗಾಗುವಂತೆ ಆಲೋಚಿಸಿ, ಸಾಹಿತ್ಯ ರಚಿಸಿ ವಿದ್ವತ್-ಪೂರ್ಣ ಬದುಕನ್ನು ಬಾಳಿದರಾ? ಎಂದು ಈಗ ಅಚ್ಚರಿಯಾಗುತ್ತದೆ.

ತಾನು ತಿಳಿದಿರುವ ವಿಚಾರ ಸಕಲರಿಗೂ ತಿಳಿಯಲಿ. ನನ್ನಂತೆ ಇತರರೂ ತಿಳುವಳಿಕೆ ಪಡೆಯಲಿ ಎಂದು ಸದಾ ಹಾರೈಸುತ್ತಿದ್ದ ತೇಜಸ್ವಿಯವರನ್ನು ನಾನೊಮ್ಮೆ ಈಜಿಪ್ಟಿನ ಪಿರಮಿಡ್ಡಿನ ವಿಚಾರದಲ್ಲಿ ಮಾಹಿತಿ ನೀಡಲು ಕೇಳಿದಾಗ ಸುಮಾರು 30 ನಿಮಿಷ ಸ್ಪಷ್ಟವಾದ ವಿಸ್ಮಯಕಾರೀ ವಿಷಯ ತಿಳಿಸಿದರು. ಅಲ್ಲದೆ ಅವರ ಕಂಪ್ಯೂಟರ್‌ನಲ್ಲಿದ್ದ ಮಾಹಿತಿಯನ್ನು ನಾಲ್ಕು ಪುಟದಲ್ಲಿ ಪ್ರಿಂಟ್‌ಔಟ್ ತೆಗೆದುಕೊಟ್ಟರು. 'ತಡಿ, ನಿನಗೆ ಶಾಶ್ವತ ಸೋರ್ಸ್ ಕೊಡ್ತೀನಿ' ಎಂದವರೆ, 'ರಾಜೇಶ್, ನಮ್ಮ ನ್ಯಾಷನಲ್ ಜಿಯಾಗ್ರಫಿಕ್ ಪುಸ್ತಕಗಳೆಲ್ಲಿದೆ ಹೇಳು?' ಎಂದು ತಮ್ಮ ಶ್ರೀಮತಿಯವರನ್ನು ಕೇಳಿ, 1957ನೇ ಇಸವಿಯಿಂದ ತಮ್ಮ ಸಂಗ್ರಹದಲ್ಲಿದ್ದ ಸುಮಾರು 50 ನ್ಯಾಷನಲ್ ಜಿಯಾಗ್ರಫಿಕ್ ನಿಯತಕಾಲಿಕೆಗಳನ್ನು ನೀಡಿದರು. 'ನನ್ನ ಗಿಫ್ಟ್ ಜೋಪಾನವಾಗಿ ಇಟ್ಟುಕೋ, ನನಗೇನಾದರೂ ಮಾಹಿತಿ ಬೇಕಿದ್ದಲ್ಲಿ ಕೇಳ್ತೀನಿ, ಕೊಡುವಿಯಂತೆ' ಎಂದಿದ್ದರು. ಆ ನಂತರ ಎರಡು ಬಾರಿ ಬಂದು ಕೆಲ ಮಾಹಿತಿಯನ್ನು ಕೂಡಾ ರೆಫರ್ ಮಾಡಿದ್ದರು. ಅವರು ನನಗೆ ನೀಡಿದ, ಅವರ ಅನೇಕ ಬರಹಗಳಿಗೆ ಪ್ರೇರಣೆಯಾಗಿದ್ದ ಪುಸ್ತಕಗಳು ನನ್ನಲ್ಲಿ ಇರುವುದು ನನ್ನ ಭಾಗ್ಯವೆಂದೇ ತಿಳಿದಿದ್ದೇನೆ.

ತೇಜಸ್ವಿಯವರ ನೆನಪನ್ನು ಸದಾ ಹಸಿರಾಗಿಸುವ ನೂರೆಂಟು ನೆನಪುಗಳಿವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಮೊಗೆದು ಕೊಡಲು ಯತ್ನಿಸಿದ್ದೇನೆ.

ಒಮ್ಮೆ 'ನಾಳೆ ಭಾನುವಾರ ಅಲ್ವಾ? ನಿನಗೆ ರಜೆ ಇರುತ್ತೆ. ಮನೆ ಹತ್ರ ಬಾ. ಬೆಳಿಗ್ಗೆ 9 ಗಂಟೆಗೆ' ಅಂದ್ರು. 'ಏನು ವಿಚಾರ.. ರೆಡಿಯಾಗೇ ಬರ್ಬೇಕಲ್ವಾ' ಅಂದೆ. 'ಕ್ಯಾಮರಾ



www.tejaswivismaya.com

‘ವೆರಿಗುಡ್, ಮುಂಚೆನೇ ಹೇಳಿ ಒಳ್ಳೆ ಕೆಲ್ಸ ಮಾಡಿದ್ರಿ. ನಾನವತ್ತು ಮೂಡಿಗೆರೆ ಕಡೆ ತಲೇನೇ ಹಾಕಲ್ಲ. ಬಡ್ಡಿಮಕ್ಕ.. ಮೂಡಿಗೆರೆಯಲ್ಲಿ ಕಣ್ಣು ಬಿಟ್ಕೊಂಡೇ ನೆಟ್ಟಗೆ ಬೈಕ್ ಓಡ್ಸಲ್ಲ. ಇನ್ನು ಕಣ್ಣು ಮುಚ್ಕೊಂಡು ಓಡುಸ್ತಾರಂತೆ! ಯಾರ್ನಾದ್ರೂ ಸಾಯಿಸ್ತೀರಿ,. ಇಲ್ಲಾ ನೀವೇ ಕೈಕಾಲು ಮುರ್ಕೊತೀರಿ.. ಅಯೋಗ್ಯರಾ. ನಿಮಗೆ ಸಾವಿರ ಥ್ಯಾಂಕ್ಸ್ ಮಾರಾಯರ! ಮುಂಚೇನೇ ಹೇಳಿದ್ದಕ್ಕೆ’

ಹಿಡ್ಕಂಡು ಬಾ. ಸುಮ್ನೆ ಬರಕ್ಕೆ ಏನು ದಾಡಿ ನಿಂಗೆ? ಎಕ್ಸ್‌ಪ್ಲೆನೇಷನ್ ಬೇರೆ ಕೇಳ್ತಾನೆ ಅಯೋಗ್ಯ’ ಅಂದರು. ಬೆಳಿಗ್ಗೆ ಸರಿಯಾಗಿ ಹೋದ್ರೆ ಇನ್ನೂ ಹೊರಡುವ ಸಿದ್ಧತೆಯಲ್ಲಿದ್ದರು. ಹೊಸ ಮನೆಯ ನವೀಕರಣ ಕೆಲಸ ನಡೆಯುತ್ತಿದ್ದರಿಂದ ಸ್ಟೋರ್ ರೂಂನಲ್ಲಿ ಅವರು ತಾತ್ಕಾಲಿಕವಾಗಿ ವಾಸವಿದ್ದರು.

‘ತಿಂಡಿಯಾಗಿದ್ಯೇನಯ್ಯಾ?’

‘ಆಗಿದೆ.’

‘ಆದ್ರಾಗ್ಲಿ, ನನ್ಜೊತೆ ಸ್ವಲ್ಪ ತಿನ್ನುವಿಯಂತೆ’ ಎಂದು ರೊಟ್ಟಿ ಜೊತೆ ಬೆಂಡೇಕಾಯಿ ಪಲ್ಯ ಕೊಟ್ಟರು.

‘ನಡಿ, ಟವರ್ ಹತ್ತಬೇಕು’ ಎಂದರು. ‘ಯಾವ ಟವರ್?’ ಎಂದರೆ, ‘ಸುಮ್ನೆ ನಡಿ’ ಎಂದವರೆ ಸ್ಕೂಟರ್ ನಿಲ್ಲಿಸಿದ್ದು ಹ್ಯಾಂಡ್‌ಪೋಸ್ಟ್‌ನ ಮೈಕ್ರೋವೆವ್ ಟವರ್ ಮುಂದೆ! ಅಲ್ಲಿ ಗೆಳೆಯರಾದ ಬಿಎಸ್‌ಎನ್‌ಎಲ್‌ನ ಬಸವರಾಜ್ ಮೊದಲೇ ಬಂದು ನಮಗಾಗಿ ಕಾಯುತ್ತಿದ್ದರು. ಸುಮಾರು 200 ಅಡಿ ಎತ್ತರದ ಟವರ್‌ಅನ್ನು ನಮಗಿಂತ ಚುರುಕಾಗಿ ಹತ್ತಿದ ತೇಜಸ್ವಿ ತುದಿ ತಲುಪಿದೊಡನೆ ಹೈಸ್ಕೂಲ್ ಹುಡುಗನಂತೆ ಪುಳಕಗೊಂಡು ಸುತ್ತಲಿನ ವಾತಾವರಣವನ್ನು ಅಚ್ಚರಿಯಿಂದ, ಅಷ್ಟೆತ್ತರದಿಂದ, ಅಧಿಪತಿಯ ಗಂಭೀರತೆಯಿಂದ ಗಮನಿಸತೊಡಗಿದರು. ಮೇಲೆ ನಿಂತೇ ಅದು ಇದು ಮಾತಾಡುತ್ತಾ ಜೀಕುತ್ತಾ, ಜೀಕುತ್ತಾ ಇಡೀ ಟವರ್‌ನ್ನೇ ನೆಲಕ್ಕೆ ತಾಕುವಂತೆ ಅಲುಗಾಡಿಸುವ ಸಾಧ್ಯತೆಯ ಬಗ್ಗೆ ವಿವರಣೆ ನೀಡಿದರು. ಅವರದೇ ಫೋಟೋಗ್ರಾಫಿಕ್ ಭಾಷೆಯಲ್ಲಿ ಹೇಳುವಂತೆ ಹೇಝ್ ಇದ್ದುದರಿಂದ ವಿಶೇಷವಾಗಿ ಫೋಟೋಗಳನ್ನೇನೂ ತೆಗೆಯದೆ ‘ಇನ್ನೆಂದಾದರೂ ವಾತಾವರಣ ಅನುಕೂಲವಾಗಿದ್ದರೆ ಮೇಲೇರಿ ಪ್ರಯತ್ನಿಸೋಣ’ ಎಂದುಕೊಂಡು ಹಿಂದಿರುಗಿದೆವು.

*****

ನನಗಾಗ ಮೂಡಿಗೆರೆಗೆ ವರ್ಗವಾಗಿತ್ತಷ್ಟೆ. ತೇಜಸ್ವಿಯವರು ಭೇಟಿಯಾದಾಗ ‘ನೇಚರ್ ಕ್ಲಬ್ ಅಂತ ಒಂದು ಸಂಸ್ಥೆ ಪ್ರಾರಂಭಿಸಿದ್ದೇವೆ, ನಿಮ್ಮಂತ ಹಿರಿಯರು, ಈ ವಿಚಾರದಲ್ಲಿ ಆಸಕ್ತಿ, ತಿಳುವಳಿಕೆ ಇದ್ದವರು ನಮ್ಮೊಡನೆ ಇದ್ದರೆ ನಮಗೆ ಸ್ಫೂರ್ತಿ ಸಿಗುತ್ತೆ. ನಿಮ್ಮ ಮಾರ್ಗದರ್ಶನವೂ ಇರುತ್ತೆ. ನಿಮಗೇನನ್ನಿಸುತ್ತೆ?’ ಎಂದೆ. ‘ನನಗೆಲ್ಲಿ ಪುರುಸೊತ್ತಿದೆಯಯ್ಯಾ ಯೋಚಿಸಿ ನೋಡ್ತೀನಿ’ ಎಂದು ಬಸ್‌ಸ್ಟಾಪ್‌ನೆಡೆಗೆ ಸ್ಕೂಟರ್ ತಿರುಗಿಸಿದ್ದರು. ಮೂಡಿಗೆರೆಯ ಘಟಾನುಘಟಿ ಸ್ವಯಂಸೇವಾ ಸಂಸ್ಥೆಗಳು, ರಾಜ್ಯಮಟ್ಟದ ಸಂಘಟನೆಗಳು ತೇಜಸ್ವಿಯಂತಹ ತೇಜಸ್ವಿಯವರನ್ನು ತಮ್ಮೊಡನೆ ಗುರುತಿಸಿಕೊಳ್ಳಲು ಪ್ರಯತ್ನಿಸಿ ವಿಫಲವಾದ ವಿಚಾರ ಗೊತ್ತಿದ್ದರಿಂದಲೇ ಅಳುಕಿನಿಂದಲೇ, ಆದರೆ ಭರವಸೆಯಿಂದಲೇ ಪ್ರಸ್ತಾಪಿಸಿದ್ದೆ, ಮೂರ್ನಾಲ್ಕು ದಿನ ತೇಜಸ್ವಿಯವರ ದರ್ಶನ ಆಗಲೇ ಇಲ್ಲ.

ಒಂದು ದಿನ ಇದ್ದಕ್ಕಿದ್ದಂತೆ ಬ್ಯಾಂಕಿಗೆ ಬಂದವರೇ ‘ನಿಮ್ಮ ನೇಚರ್ ಕ್ಲಬ್ ಸೇರೋಕೆ ಏನ್ ಮಾಡ್ಬೇಕು ಮಾರಾಯ’ ಅಂದೇ ಬಿಡೋದೆ! ‘ಎನ್‌ರೋಲ್‌ಮೆಂಟ್ ಫಾರಂ ಇದೆ. 105 ರೂಪಾಯಿ ಸದಸ್ಯತ್ವ ಶುಲ್ಕ ಕೊಡಿ’ ಎಂದೆ. ‘ಹಾಗಾದರೆ ಮೂರು ಫಾರಂ ಕೊಡು ತಲುಪಿಸುತ್ತೇನೆ’ ಎಂದು ತೆಗೆದುಕೊಂಡು ಹೋದರು. ನನ್ನ ಆನಂದಕ್ಕೆ ಪಾರವೇ ಇರಲಿಲ್ಲ. ಅನೇಕರಿಗೆ ಅಸಾಧ್ಯವಾದುದು ನನಗೆ ಸಾಧ್ಯವಾಯಿತು ಎಂದು ಸಂತಸವಾಯಿತು.

ಮಾರನೇ ದಿನವೇ ತೇಜಸ್ವಿಯವರ ನಿಕಟವರ್ತಿಯಾದ ರಾಘವೇಂದ್ರ ಮೂರು ತುಂಬಿದ ಫಾರಂಗಳನ್ನು ತಲುಪಿಸಿದರು. ಮೊದಲನೆಯದು ತೇಜಸ್ವಿಯವರದು, ಎರಡನೆಯದು ಶ್ರೀಮತಿ ತೇಜಸ್ವಿಯವರದು, ಮೂರನೆಯದು ರಾಘವೇಂದ್ರರದು. ಯಾವುದೇ ಬಲವಾದ ಕಾರಣ, ಉದ್ದೇಶ, ದೂರದೃಷ್ಟಿ ಇಲ್ಲದೇ ತೇಜಸ್ವಿಯವರು ಯಾವುದೇ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿರಲಿಲ್ಲ. ಆದ್ದರಿಂದ ಅವರ ಈ ಪ್ರತಿಕ್ರಿಯೆ ನನಗೆ ವಿಸ್ಮಯ ಉಂಟುಮಾಡಿತ್ತು. ಯುವಕರು ಸದುದ್ದೇಶದಿಂದ ಸಂಪರ್ಕಿಸಿದಲ್ಲಿ ತಮ್ಮೆಲ್ಲ ಕೆಲಸ ಕಾರ್ಯಗಳನ್ನು ಬದಿಗಿಟ್ಟು ಇಂಟರ್ಯಾಕ್ಟ್ ಮಾಡುತ್ತಿದ್ದುದು ಅವರ ಔದಾರ್ಯ.

ನಮ್ಮ ಸಚೇತನ ಯುವಕ ಸಂಘದ ಸದಸ್ಯರೆಲ್ಲ ಒಮ್ಮೆ ಜೆ.ಸಿ. ರಸ್ತೆಯಲ್ಲಿ ಚರಂಡಿ ಶುದ್ಧಿ ಮಾಡುವ ಶ್ರಮದಾನ ನಡೆಸುತ್ತಿದ್ದೆವು. ಅದೆಲ್ಲಿಗೆ ಹೋಗುತ್ತಿದ್ದರೋ ತೇಜಸ್ವಿ, ತಮ್ಮ ಸ್ಕೂಟರಿನಲ್ಲಿ ಸರಕ್ಕನೆ ಬಂದು ನಿಲ್ಲಿಸಿ ‘ಇದೆಂತಹದೋ ಮಾರಾಯ... ಗೊಚ್ಚೆ ಬಳಿಯುವ ಕೆಲಸ ಮಾಡ್ತಿದ್ದೀರಲ್ಲ’ ಎಂದು ನಗಾಡಿದರು. ‘ಇನ್ನೇನು ಮಾಡೋದು? ಕೆಲ್ಸ ಮಾಡಿಸಬೇಕಾದೋರು ನಿದ್ದೆ ಮಾಡ್ತಿದ್ರೆ ನಾವಾದ್ರೂ ಮಾಡಿ ಅವ್ರಿಗೆ ಸ್ವಲ್ಪ ನಾಚ್ಕೆಯಾಗುವಂತೆ ಮಾಡೋಣ.. ಅದಿಕ್ಕೆ’ ಎಂದೆವು.

‘ಬಡ್ಡಿ ಮಕ್ಳು, ನೀವು ಚರಂಡಿ ತೊಳೀತೀರಿ ಅಂತ ಗೊತ್ತಾದ್ರೆ ಊರಲ್ಲಿರೋ ಚರಂಡೀನೆಲ್ಲಾ ನಿಮ್ ಕೈಲೇ ತೊಳೆಸ್ತಾರೆ. ಮಾನ ಮರ್ಯಾದೆ ಇಲ್ಲದ ಹೇತ್ಲಾಂಡಿಗಳು. ನಿಮ್ಮ ಪ್ರತಿಭಟನೆ ಸಾಂಕೇತಿಕ ಆಗಿರ್ಬೇಕು ಅಷ್ಟೇ. ಅವರಿಗೆ ಸಂಬ್ಳ ಕೊಡೋದು ದನ ಕಾಯಕ್ಕಲ್ಲ. ಎನಿ ಹೌ, ಒಳ್ಳೆ ಕೆಲ್ಸ ಮಾಡ್ತಿದ್ದೀರಿ ಕಣ್ರಯ್ಯಾ. ಹುಡುಗ್ರಂದ್ರೆ ನಿಮ್ಮಂಗಿರ್ಬೇಕು’ ಎಂದು ಹೊಗಳಿ ಅಟ್ಟಕ್ಕೇರಿಸಿದರು.

ಹೀಗೆ ಅಟ್ಟಕ್ಕೇರಿಸಿದ ತೇಜಸ್ವಿಯವರೇ ಮುಂದೊಂದು ದಿನ ಇನ್ನೊಂದು ಪ್ರಸಂಗದಲ್ಲಿ ನಮ್ಮನ್ನು ತರಾಟೆಗೆ ತೆಗೆದುಕೊಂಡರು.

ನಾವು ಹುಡುಗರೊಮ್ಮೆ ತೇಜಸ್ವಿಯವರನ್ನು ಭೇಟಿಯಾಗಿ ‘ಸರ್ ನಮ್ಮ ಯುವ ಸಂಘದಿಂದ ಒಂದು ಸಾಹಸ ಮಾಡ್ಬೇಕು ಅಂತಿದ್ದೇವೆ. ನೋಡೋಕೆ ನೀವು ಬರ್ಬೇಕು’ ಅಂದೆವು.

‘ಹೌದ್ರೇನಯ್ಯಾ, ಎಲ್ಲಿ? ಯಾವಾಗ?’

‘ನಾಡಿದ್ದು ಭಾನುವಾರ ಸರ್. ನಾಡಿದ್ದು ಹತ್ತು ಗಂಟೆಗೆ ನೀವು ಬಂದ್ರೆ ನಮಗೆ ಸಂತೋಷ ಸರ್.’

‘ಆಯ್ತು ಕಣ್ರಯ್ಯ.. ಬರೋಣಾಂತೆ. ಏನು ಸಾಹಸ ಮಾಡ್ತಿದ್ದೀರಿ?’

‘ಕಣ್ಣಿಗೆ ಬಟ್ಟೆ ಕಟ್ಕೊಂಡು ಟೌನ್ ಒಳಗೆ ಬೈಕ್ ಓಡಿಸ್ತೀವಿ. ಭಾರೀ ಜನ ಸೇರ್ತಾರೆ. ಬೊಂಬಾಟಾಗಿರುತ್ತೆ.’

‘ವೆರಿಗುಡ್, ಮುಂಚೆನೇ ಹೇಳಿ ಒಳ್ಳೆ ಕೆಲ್ಸ ಮಾಡಿದ್ರಿ. ನಾನವತ್ತು ಮೂಡಿಗೆರೆ ಕಡೆ ತಲೇನೇ ಹಾಕಲ್ಲ. ಬಡ್ಡಿಮಕ್ಕ.. ಮೂಡಿಗೆರೆಯಲ್ಲಿ ಕಣ್ಣು ಬಿಟ್ಕೊಂಡೇ ನೆಟ್ಟಗೆ ಬೈಕ್ ಓಡ್ಸಲ್ಲ. ಇನ್ನು ಕಣ್ಣು ಮುಚ್ಕೊಂಡು ಓಡುಸ್ತಾರಂತೆ! ಯಾರ್ನಾದ್ರೂ ಸಾಯಿಸ್ತೀರಿ,. ಇಲ್ಲಾ ನೀವೇ ಕೈಕಾಲು ಮುರ್ಕೊತೀರಿ.. ಅಯೋಗ್ಯರಾ. ನಿಮಗೆ ಸಾವಿರ ಥ್ಯಾಂಕ್ಸ್ ಮಾರಾಯರ! ಮುಂಚೇನೇ ಹೇಳಿದ್ದಕ್ಕೆ’ ಎಂದು ತಿರುಗಿ ಸಹ ನೋಡದೆ ಮನೆ ಸೇರಿಕೊಂಡರು.

ಹೇಳಬೇಕಾದ ವಿಚಾರವನ್ನು ವಿಡಂಬನಾತ್ಮಕವಾಗಿ, ನೇರವಾಗಿ ಹೇಳಿ ಚಕಿತಗೊಳಿಸುತ್ತಿದ್ದರು ತೇಜಸ್ವಿ. ಕಾವೇರಿ ವಿವಾದ, ಬೆಳಗಾವಿಯಲ್ಲಿ ಮೋರೆಯವರ ಮುಖಕ್ಕೆ ಮಸಿ ಬಳಿದ ಪ್ರಕರಣದಲ್ಲಿ ನಾಡಿಗೆ ನಾಡೇ ಮುಂದೇನು ಎಂದು ಯೋಚಿಸುತ್ತಿದ್ದಾಗ ಸರಳವಾಗಿ, ನೇರವಾಗಿ ಕಡ್ಡಿ ಮುರಿದಂತೆ ಮಾತನಾಡಿದವರೆಂದರೆ ನಮ್ಮ ತೇಜಸ್ವಿ ಮಾತ್ರ.

(ಮುಂದಿನ ವಾರ: ಇನ್ನೊಂದ್ಸಲ ಹಿಂಗ್ ಮಾಡಿದ್ರೆ ಗ್ರಾಚಾರ ಬಿಡಿಸ್ತೀನಿ..!)

ಚಿತ್ರ: ಧನಂಜಯ ಜೇವಾಳ ಬಿ.ಕೆ.

www.tejaswivismaya.com